ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue 2, March-April, 2024, Pp. 1-13.
©*IIMRD*, Mysuru

IIMRD JOURNALS

www.iimrd.com

# ಜಾಗತೀಕರಣ ಕುರಿತು ಕರ್ನಾಟಕ ರಾಜ್ಯ ರೈತ ಸಂಘದ ನಿಲುವು ಮತ್ತು ಹೋರಾಟಗಳು: ಒಂದು ಅವಲೋಕನ

**ಡಾ.ಆನಂದ ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

**ಸಾರಾಂಶ: (Abstract)**

*ಭಾರತದ ರೈತ ಚಳುವಳಿಯ ಚರಿತ್ರೆಯಲ್ಲಿ ಕರ್ನಾಟಕದ ರೈತ ಚಳುವಳಿಗಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಇದಕ್ಕೆ ಕಾರಣೀಭೂತವಾದದ್ದು ಕರ್ನಾಟಕ ರಾಜ್ಯ ರೈತ ಸಂಘ. ಏಕೆಂದರೆ ಸಣ್ಣ ಪ್ರಮಾಣದಲ್ಲಿ ಪ್ರತಿಭಟನೆಯ ಸ್ವರೂಪದಲ್ಲಿದ್ದ ಕರ್ನಾಟಕದ ರೈತ ಚಳುವಳಿಯನ್ನು ಜಾಗತಿಕ ಹಂತಕ್ಕೆ ಕೊಂಡೊಯ್ದು, ಅದನ್ನು ಬೃಹತ್ ಚಳುವಳಿಯಾಗಿ ಮಾರ್ಪಡಿಸಿ ಅದಕ್ಕೊಂದು ವಿಶೇಷ ಸ್ಥಾನಮಾನ ದೊರಕಿಸಿಕೊಟ್ಟ ಹೆಗ್ಗಳಿಕೆ ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಸಲ್ಲುತ್ತದೆ. ಈ ಮೊದಲು ಕರ್ನಾಟಕದಲ್ಲಿ ಅನೇಕ ರೈತ ಚಳುವಳಿಗಳು ನಡೆದಿವೆಯಾದರೂ ಅದಕ್ಕೊಂದು ನಿಶ್ಚಿತ ರೂಪ ಮತ್ತು ಸಂಘಟನಾ ಚೌಕಟ್ಟು ಪ್ರಾಪ್ತವಾಗಿದ್ದು 1980ರಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆಯಾದ ನಂತರವೇ ಆಗಿದೆ. ಪ್ರಸ್ತುತ ಲೇಖನದಲ್ಲಿ ಜಾಗತೀಕರಣ ಕುರಿತು ರಾಜ್ಯ ರೈತ ಸಂಘದ ನಿಲುವು ಮತ್ತು ಹೋರಾಟಗಳ ಬಗ್ಗೆ ಅವಲೋಕಿಸಲಾಗಿದೆ.*

**ಮುಖ್ಯಪದಗಳು (Keywords):** ಜಾಗತೀಕರಣ, ಕರ್ನಾಟಕ ರಾಜ್ಯ ರೈತ ಸಂಘ, ಹೋರಾಟ, ರೈತ ಚಳುವಳಿ.

**ಪೀಠಿಕೆ**

1980ರ ದಶಕದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ರೈತ ಚಳುವಳಿಗಳು ಪ್ರಮುಖವಾಗಿ ಕಂಡುಬಂದಿವೆ. ಮಹಾರಾಷ್ಟ್ರದಲ್ಲಿ ಶೇತ್ಕಾರಿ ಸಂಘಟನೆ, ಪಂಜಾಬಿನಲ್ಲಿ ಖೇತಬಾರಿ ಯೂನಿಯನ್, ಉತ್ತರ ಪ್ರದೇಶದಲ್ಲಿ ಭಾರತೀಯ ಕಿಸಾನ್ ಯೂನಿಯನ್, ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಡಿಯಲ್ಲಿ ನಡೆದ ಹೋರಾಟಗಳು ನವರೈತ ಹೋರಾಟಗಳೆಂದು ಕರೆಯಲ್ಪಟ್ಟಿವೆ. ಎಡಪಂಥೀಯ ಚಿಂತಕರು ಇವುಗಳನ್ನು ಶ್ರೀಮಂತ ರೈತ ಹೋರಾಟವೆಂದೂ ಕರೆದಿದ್ದಾರೆ.[1] ಕರ್ನಾಟಕದಲ್ಲಿ ನಡೆದ ರೈತ ಚಳುವಳಿಗಳಲ್ಲಿ ಅತ್ಯಂತ ಪ್ರಧಾನ ಪಾತ್ರ ನಿರ್ವಹಿಸಿದ ಹಿರಿಮೆ ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಸಲ್ಲುತ್ತದೆ. ಶಿವಮೊಗ್ಗ ಕಬ್ಬು

---

[1] ಮುಜಾಫರ್ ಅಸ್ಸಾದಿ. (2009). *ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ, ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ.* ಪ್ರಗತಿ ಗ್ರಾಫಿಕ್ಸ್. ಪು.97.

*Please cite this article as:* *ಆನಂದ ಎಸ್* (2024). ಜಾಗತೀಕರಣ ಕುರಿತು ಕರ್ನಾಟಕ ರಾಜ್ಯ ರೈತ ಸಂಘದ ನಿಲುವು ಮತ್ತು ಹೋರಾಟಗಳು: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಸಂಪುಟ–5, ವಿಶೇಷ ಸಂಚಿಕೆ–2. ಪು.ಸಂ. 1–13.*

ಬೆಳೆಗಾರರ ಸಂಘ ರೈತ ಸಂಘವಾಗಿ ರೂಪುಗೊಂಡು, ರಾಜ್ಯದ ವಿವಿಧ ಭಾಗಗಳಲ್ಲಿ ರೈತರನ್ನು ಸಂಘಟಿಸಿತು. ಮುಂದೆ ರಾಜ್ಯದ ರೈತರ 19 ಪ್ರಮುಖ ಬೇಡಿಕೆಗಳನ್ನು ಕ್ರೂಢೀಕರಿಸಿ ಸರ್ಕಾರದ ಮುಂದಿಟ್ಟು ಅವುಗಳ ಈಡೇರಿಕೆಗಾಗಿ ಒತ್ತಾಯ ಮಾಡುವುದರೊಂದಿಗೆ 1980ರಲ್ಲಿ ಕರ್ನಾಟಕ ರಾಜ್ಯ ರೈತ ಸಂಘವಾಗಿ ಅಸ್ತಿತ್ವಕ್ಕೆ ಬಂದಿತು. ನರಗುಂದ ರೈತ ಚಳುವಳಿಯ ಹಿನ್ನಲೆಯಲ್ಲಿ ಅಂದಿನ ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೆಲ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿದ್ದು, ರೈತ ಸಂಘ ತನ್ನ ಹೋರಾಟಕ್ಕೆ ದೊರೆತ ಆರಂಭದ ವಿಜಯ ಎಂದು ಭಾವಿಸಿತ್ತು. ಈ ಹಿನ್ನೆಲೆಯಲ್ಲಿ ಅಂದಿನಿಂದಲೂ ರೈತ ಸಂಘ ಬಹು ಕ್ರಿಯಾಶೀಲವಾಗಿ ಹೋರಾಟ ಮಾಡುತ್ತಾ ಬಂದಿದೆ.

ಕರ್ನಾಟಕದ ರೈತ ಚಳುವಳಿಗಳನ್ನು ಕುರಿತು ಅಧ್ಯಯನ ಮಾಡಿರುವ ಪ್ರಾಧ್ಯಾಪಕರಾದ ಮುಜಾಫರ್ ಅಸ್ಸಾದಿ ರೈತ ಸಂಘದ ಬೇಡಿಕೆ ಹಾಗೂ ಹೋರಾಟದ ಸ್ವರೂಪವನ್ನು ಕೇಂದ್ರೀಕರಿಸಿ ರೈತ ಹೋರಾಟವನ್ನು ಐದು ಬಗೆಗಳಾಗಿ ವಿಂಗಡಿಸಿದ್ದಾರೆ. ಸಾಲ ಮರುಪಾವತಿ ಮತ್ತು ಸ್ಥಿರಾಸ್ತಿ–ಚರಾಸ್ತಿ ಪಟಾಕಿನ ವಿರುದ್ಧ ಹೋರಾಟ, ಗ್ರಾಮೀಣ ಸಂಪನ್ಮೂಲಗಳ ಶೋಷಣೆ ವಿರುದ್ಧ ಹೋರಾಟ, ತೌಲನಿಕ ಬೆಲೆ/ವೈಜ್ಞಾನಿಕ ಬೆಲೆಗಳಿಗಾಗಿ ಹೋರಾಟ, ರಾಜಕೀಯ ಅಧಿಕಾರಕ್ಕಾಗಿ ಹೋರಾಟ ಹಾಗೂ ಉದಾರೀಕರಣದ ವಿರುದ್ಧ ಹೋರಾಟ. ಈ ಐದು ಬಗೆಯ ಹೋರಾಟಗಳಲ್ಲಿ ರೈತ ಚಳುವಳಿಯ ಬೇಡಿಕೆ ಹಾಗೂ ಹೋರಾಟದ ಸ್ವರೂಪವನ್ನು[2] ಹೇಳಲು ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆ ಪ್ರಸ್ತುತ ಈ ಲೇಖನದಲ್ಲಿ ಜಾಗತೀಕರಣ ಕುರಿತು ರೈತ ಸಂಘದ ನಿಲುವು ಮತ್ತು ಅದು ಜಾಗತೀಕರಣದ ವಿರುದ್ಧ ಸಂಘಟಿಸಿದ ಹೋರಾಟಗಳನ್ನು ಅವಲೋಕಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಜಾಗತೀಕರಣದ ವಿರುದ್ಧ ರೈತ ಸಂಘವು ರೂಪಿಸಿದ ಹೋರಾಟಗಳು**

ಜಾಗತೀಕರಣವೆಂದರೆ ಇಡೀ ವಿಶ್ವವೇ ಒಂದು ಗ್ರಾಮವಾಗಬೇಕು ಎಂಬ ಪರಿಕಲ್ಪನೆ. ಜಾಗತೀಕರಣ ಪ್ರಕ್ರಿಯೆಗೆ ವಿಶ್ವವನ್ನು ಒಳಪಡಿಸಲು ನಡೆಸಲಾದ ಪ್ರಯತ್ನಗಳು ದುರುದ್ದೇಶದಿಂದ ಪ್ರಾರಂಭವಾದವು. ಏಕೆಂದರೆ ಅದು ಮಾನವ ಕಲ್ಯಾಣಕ್ಕಾಗಿ ರೂಪಿತವಾದುದಲ್ಲ. ಏಕರೂಪತೆ ಎನ್ನುವುದು ಪ್ರಕೃತಿ ವಿರುದ್ಧವಾದದ್ದು ಅಸಮಾನತೆಯನ್ನು ಪ್ರತಿಪಾದಿಸುವಂಥದ್ದು. ಇಂತಹ ಚಿಂತನೆಯ ಗರ್ಭದಲ್ಲಿ ಜನಿಸಿದ ಜಾಗತೀಕರಣವೆಂಬ ಪರಿಕಲ್ಪನೆಯು ಬಹುರಾಷ್ಟ್ರೀಯ ಕಂಪನಿಗಳು ಆರ್ಥಿಕವಾಗಿ ಲಾಭಗಳಿಸುವ ಯೋಜನೆಯಾಗಿದೆ. ಇದೊಂದು ಬಂಡವಾಳಶಾಹಿ ರಾಷ್ಟ್ರಗಳ ಕುಟಿಲ ತಂತ್ರವಾಗಿದ್ದು, ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಗುಲಾಮರನ್ನಾಗಿ ಮಾಡುವ ಹುನ್ನಾರದ ನೀತಿಯಾಗಿದೆ ಎಂಬುದು ರೈತ ಸಂಘದ ನಿಲುವಾಗಿತ್ತು. ಹೀಗಾಗಿ ರೈತ ಸಂಘ ಜಾಗತೀಕರಣ ನೀತಿಯನ್ನು ಒಪ್ಪದೆ ಅದರ ವಿರುದ್ಧ ತೀವ್ರವಾದ ಹೋರಾಟಗಳನ್ನು ಮಾಡುತ್ತಾ ಬಂದಿದೆ.

**ರಸಗೊಬ್ಬರ ನೀತಿ ವಿರೋಧಿಸಿ ಚಳುವಳಿ–1991**

1991ರಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಭಾರತದ ಕೃಷಿಯು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿದೆ. ಅದರಂತೆ ವಿಶ್ವಬ್ಯಾಂಕು ಹಲವು ಸುಧಾರಣೆಗಳನ್ನು ಸೂಚಿಸಿದ್ದು ಅದರಲ್ಲಿ ಬಿತ್ತನೆಬೀಜ, ರಸಗೊಬ್ಬರ ಮತ್ತು ಕೃಷಿ ಉಪಕರಣಗಳ ಮೇಲಿನ ಸಬ್ಸಿಡಿ ತೆಗೆದು ಹಾಕುವುದು ಸಹ

[2] ವಿಜಯ್ ಪೂಣಚ್ಚ ತಂಬಂಡ (ಪ್ರಸಂ.). (2010). *ಸಮಕಾಲೀನ ಕರ್ನಾಟಕ, ಸಂಪುಟ–6*. ಕನ್ನಡ ವಿಶ್ವವಿದ್ಯಾಲಯ. ಪು.443.

ಒಂದಾಗಿದೆ. ಹೀಗಾಗಿ ಅಂತರರಾಷ್ಟ್ರೀಯ ಸಂಸ್ಥೆಗಳ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ರಸಗೊಬ್ಬರದ ಬೆಲೆ ಏರಿಕೆ ಮಾಡಿ, ಸಬ್ಸಿಡಿ ತೆಗೆಯುವ ಹುನ್ನಾರ ಮಾಡಿತ್ತು. ಜೊತೆಗೆ ನೀರಾವರಿ, ವಿದ್ಯುತ್ ಸಬ್ಸಿಡಿಗಳನ್ನು ಕಡಿತಗೊಳಿಸುವ ತಂತ್ರ ರೂಪಿಸಿತ್ತು. ಈಗಾಗಲೇ ಕೃಷಿ ಸಾಗುವಳಿ ವೆಚ್ಚ ಹೆಚ್ಚಾಗಿದ್ದರೂ [3] ಜಾಗತೀಕರಣದಿಂದಾಗಿ ಮತ್ತಷ್ಟು ರೈತ ವಿರೋಧಿ ಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿದ್ದ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ರಾಜ್ಯ ರೈತಸಂಘವು 1991ರಲ್ಲಿ ಚಳುವಳಿ ಪ್ರಾರಂಭಿಸಿತು. ಈ ಚಳುವಳಿಯ ಅಂಗವಾಗಿ ಆಗ್ರೋ ಕೇಂದ್ರ ಸೇರಿದಂತೆ ಗೊಬ್ಬರ ಕಂಪನಿಗಳ ದಾಸ್ತಾನು ಮಳಿಗೆಗಳಿಗೆ ಮುತ್ತಿಗೆ ಹಾಕಿ ಅಲ್ಲಿರುವ ಗೊಬ್ಬರವನ್ನು ಹಳೆ ಬೆಲೆಯಲ್ಲಿಯೇ ಮಾರಾಟ ಮಾಡುವಂತೆ ಒತ್ತಾಯಿಸಿತು.

ದಿನಾಂಕ 12–03–1991 ರಂದು ರಸ್ತೆ ತಡೆ, ರೈಲು ತಡೆ ಮೂಲಕ ಪ್ರತಿಭಟಿಸಲಾಯಿತು. ರಾಣೆಬೆನ್ನೂರು, ಹಿರೆಕೆರೂರು ಹಾಗೂ ಚಾಮರಾಜ ನಗರಗಳಲ್ಲಿ ಈ ಚಳುವಳಿ ಹೆಚ್ಚು ತೀವ್ರವಾಗಿತ್ತು. ದಿನಾಂಕ 02–09–1991 ರಲ್ಲಿ ಶ್ರೀನಿವಾಸಪುರದಲ್ಲಿ ರಾಸಾಯನಿಕ ಗೊಬ್ಬರಗಳ ಬೆಲೆಏರಿಕೆ ಮತ್ತು ಅಸಮರ್ಪಕ ವಿದ್ಯುತ್ ಪೂರೈಕೆ ಬಗ್ಗೆ ನಾಲ್ಕೈದು ಸಾವಿರ ರೈತರು ಸೇರಿ ತಹಸೀಲ್ದಾರ್ ಕಛೇರಿ ಬಳಿ ಪ್ರತಿಭಟನೆ ನಡೆಸಿದರು.[4] ಸಹಾಯಧನ ರದ್ದುಪಡಿಸುವ ಸರ್ಕಾರದ ಕ್ರಮದಿಂದಾಗಿ ಕೃಷಿ ಸಾಗುವಳಿ ವೆಚ್ಚ ಹೆಚ್ಚಾಗುತ್ತಿತ್ತು. ಜೊತೆಗೆ ಹೊರ ದೇಶಗಳಿಂದ ಆಮದಾಗುತ್ತಿರುವ ಕೃಷಿ ವಸ್ತುಗಳಿಂದ ಬೆಲೆ ಕುಸಿತಗೊಂಡು ಇದರ ಪರಿಣಾಮವಾಗಿ ರೈತರ ಸಾಲದ ಹೊರೆ ಹೆಚ್ಚುತ್ತಿತ್ತು. ಇದರಿಂದಾಗಿ ರೈತ ಸಂಘ ವೈಜ್ಞಾನಿಕ ಬೆಲೆಗಾಗಿ ಹೋರಾಟ, ಬೆಲೆ ರಕ್ಷಣೆಗಾಗಿ ಹೋರಾಟ, ಸಾಲ ರದ್ದತಿಗಾಗಿ ಹೋರಾಟ, ಸಾಲ ಮತ್ತು ಕರ ನಿರಾಕರಣೆ ಚಳುವಳಿ, ಆಮದು ವಿರುದ್ಧ ಚಳುವಳಿ ಹಾಗೂ ಬಂದರುಗಳ ಮುತ್ತಿಗೆ ಚಳುವಳಿಯಂತಹ ಹೋರಾಟಗಳನ್ನು ಮಾಡಿತು. ಹಾಗೂ ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರಕ್ಕೆ ಅಡ್ಡಿಯಾಗಿರುವ ವಿಶ್ವ ವಾಣಿಜ್ಯ ಸಂಸ್ಥೆಯಿಂದ ಹೊರ ಬರುವಂತೆ ಒತ್ತಾಯ ಮಾಡಿತು.[5] ರಸಗೊಬ್ಬರದ ಬೆಲೆಗಳನ್ನು ಕೇಂದ್ರ ಸರ್ಕಾರ ಕೂಡಲೇ ಇಳಿಸದಿದ್ದರೆ ಚಳುವಳಿಯನ್ನು ತೀವ್ರಗೊಳಿಸುವ ಎಚ್ಚರಿಕೆಯನ್ನು ರೈತಸಂಘ ನೀಡಿತ್ತು. ಈ ಚಳುವಳಿ ಕರ್ನಾಟಕ ರಾಜ್ಯ ರೈತಸಂಘ ಜಾಗತೀಕರಣದ ವಿರುದ್ಧ ನಡೆಸಿದ ಮೊಟ್ಟಮೊದಲ ಚಳುವಳಿಯಾಗಿದ್ದು, ಈ ಹೋರಾಟದ ಮೂಲಕ ರೈತ ಸಂಘದ ಹೋರಾಟವು ಸ್ಥಳೀಯ ಹಂತದಿಂದ ಅಂತರರಾಷ್ಟ್ರೀಯ ಹಂತಕ್ಕೆ ವಿಸ್ತಾರಗೊಂಡಿತು.

**ಗ್ಯಾಟ್ ಒಪ್ಪಂದ–ಡೆಂಕೆಲ್ ಪ್ರಸ್ತಾವನೆ ವಿರೋಧಿ ಚಳುವಳಿ–1993**

ಗ್ಯಾಟ್ ಬಹುರಾಷ್ಟ್ರೀಯ ವ್ಯಾಪಾರ ಪದ್ಧತಿಯಲ್ಲಿ ಆಮದು–ರಫ್ತು ಸುಂಕಗಳ ಮತ್ತು ವ್ಯಾಪಾರದ ಬಗ್ಗೆ ಮಾಡಿಕೊಳ್ಳುವ ಸಾಮಾನ್ಯ ಒಪ್ಪಂದವಾಗಿದೆ. ಕೃಷಿ ಕ್ಷೇತ್ರಕ್ಕೆ ಅನ್ವಯಿಸಿ ಹೇಳುವುದಾದರೆ ಕೃಷಿ ಅಗತ್ಯ ವಸ್ತುಗಳು ಹಾಗೂ ಉತ್ಪನ್ನಗಳ ಹಕ್ಕನ್ನು ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಹಿಡಿತದಲ್ಲಿಟ್ಟುಕೊಂಡು

[3] ರಂಗಸ್ವಾಮಿ.ಎ., (ಪ್ರ.ಸಂ). (2012). *ಸತ್ಯನಾರಾಯಣ (ಲೇ), ಜಾಗತೀಕರಣ ಮತ್ತು ಕರ್ನಾಟಕ.* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ. ಪು.37.

[4] ಚಂದ್ರಶೇಖರ್ ಎಸ್, ಸುರೇಂದ್ರರಾವ್ ಬಿ (ಸಂ). (2016). *ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು.* ಸಂಪುಟ–9, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. ಪು.237–238.

[5] ನಂಜುಂಡಸ್ವಾಮಿ.ಎಂ.ಡಿ.. (2000). ರೈತ ಚಳುವಳಿ: ಮತ್ತೆ ಪರ್ಯಾಯ ಸರ್ಕಾರದೆಡೆಗೆ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ. ಪು.29–30.

ರೈತರನ್ನು ಶೋಷಿಸುವ ನೀತಿ ಇದಾಗಿದೆ. ಇದೊಂದು ಊಳಿಗಮಾನ್ಯ ಸ್ವರೂಪದ ಜಮೀನ್ದಾರಿ ವ್ಯವಸ್ಥೆಯ ಆಧುನಿಕ ರೂಪವಾಗಿದ್ದು ರೈತರನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವ ಅಡಿಯಾಳಾಗಿಸುತ್ತಿತ್ತು.[6] ಇದರಿಂದ ಕೇಂದ್ರ ಸರ್ಕಾರವು ಅಂತರರಾಷ್ಟ್ರೀಯ ವಾಣಿಜ್ಯ ಒಪ್ಪಂದಕ್ಕೆ ಸಹಿಹಾಕುವ ಮೂಲಕ ಹೊರದೇಶದ ಉತ್ಪನ್ನಗಳು ದೇಶಕ್ಕೆ ಆಮದಾಗಿ ಸ್ಥಳೀಯ ಬೆಲೆಗಳು ಮತ್ತಷ್ಟು ಕುಸಿಯುವ ಆತಂಕ ಇತ್ತು. ರೈತರ ಬೆಳೆಗಳಿಗೆ ಬೆಲೆ ಕಡಿಮೆಯಾಗಲು ಭಾರತವು ಅಂತರರಾಷ್ಟ್ರೀಯ ಮಾರುಕಟ್ಟೆಗೆ ತನ್ನನ್ನು ಒಪ್ಪಿಸಿಕೊಳ್ಳುವುದು ಪ್ರಮುಖ ಕಾರಣವಾಗಿತ್ತು. ಇದನ್ನು ಚೆನ್ನಾಗಿ ಗ್ರಹಿಸಿದ ಕರ್ನಾಟಕ ರಾಜ್ಯ ರೈತಸಂಘ ಗ್ಯಾಟ್ ಹಾಗೂ ಡೆಂಕಲ್ ಪ್ರಸ್ತಾವನೆ ವಿರುದ್ಧ ಹೋರಾಟ ಆರಂಭಿಸಿತು. ಜಾಗತೀಕರಣ ವಿರುದ್ಧ ಹೋರಾಡಲು ರಾಷ್ಟ್ರಮಟ್ಟದ ರೈತ ಸಂಘಟನೆಗಳನ್ನು ಒಂದುಗೂಡಿಸಲು ರೈತ ಸಂಘ ದಿನಾಂಕ 02–10–1992 ರಂದು ಕರ್ನಾಟಕದ ಹೊಸಪೇಟೆಯಲ್ಲಿ ರೈತರ ಬೃಹತ್ ಸಮಾವೇಶವನ್ನು ಏರ್ಪಡಿಸಿತ್ತು. ಮಹೇಂದ್ರಸಿಂಗ್ ಟಿಕಾಯತ್, ಶಿವಸ್ವಾಮಿ, ವಂದನಾಶಿವ ಮುಂತಾದವರು ಭಾಗವಹಿಸಿದ್ದ ಈ ಸಮಾವೇಶದಲ್ಲಿ ಪ್ರಪ್ರಥಮ ಬಾರಿಗೆ ಬೀಜ ಸತ್ಯಾಗ್ರಹಕ್ಕೆ ಚಾಲನೆ ನೀಡಲಾಯಿತು.

ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಮಾದರಿಯಂತೆ ಬೀಜ ಸತ್ಯಾಗ್ರಹವನ್ನು ದೆಹಲಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಇದಕ್ಕಾಗಿ ಮಾರ್ಚ್ 3 ಮತ್ತು 4ರಂದು ರೈತರ ದೆಹಲಿ ಮುತ್ತಿಗೆ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಬಿತ್ತನೆಬೀಜದ ಮೇಲಿನ ಏಕಸ್ವಾಮ್ಯ, ಬೀಜ ತಯಾರಿಕೆ ಹಾಗೂ ಮಾರಾಟದ ಹಕ್ಕನ್ನು ಉಳಿಸಿಕೊಳ್ಳುವುದು, ಭಾರತದ ಪೇಟೆಂಟ್ ಕಾನೂನು ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸುವುದು. ಬೀಜ ಉತ್ಪಾದನೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ ನಿಷೇಧ, ಆಹಾರ ಕ್ಷೇತ್ರದಲ್ಲಿ ವಿಶ್ವ ಮಾರುಕಟ್ಟೆ ವ್ಯವಸ್ಥೆಗೆ ವಿರೋಧ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ದೆಹಲಿ ಮುತ್ತಿಗೆ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯರೈತಸಂಘ ಹಾಗೂ ಮಹೇಂದ್ರಸಿಂಗ್ ಟಿಕಾಯತ್ ಆಯೋಜಿಸಿದ್ದರು. ಇದರ ಜೊತೆಗೆ ದೆಹಲಿಯ ಬೋಟ್ ಕ್ಲಬ್ ಮೈದಾನದಲ್ಲಿ ಐತಿಹಾಸಿಕ ಸಮಾವೇಶ ಏರ್ಪಡಿಸಲಾಗಿತ್ತು.[7]

ಭಾರತ್ ಕಿಸಾನ್ ಯೂನಿಯನ್, ಆಜಾದಿ ಬಚಾವೋ ಆಂದೋಲನ, ನರ್ಮದಾ ಬಚಾವೋ ಆಂದೋಲನ ಸೇರಿದಂತೆ 15ಕ್ಕೂ ಹೆಚ್ಚು ಸಂಘಟನೆಗಳು ಇದರಲ್ಲಿ ಪಾಲ್ಗೊಂಡಿದ್ದವು. ದಿನಾಂಕ 27–02–1993 ರಂದು ಕರ್ನಾಟಕದ ರೈತರು 'ದೆಹಲಿ ಮುತ್ತಿಗೆ' ಹೋರಾಟದಲ್ಲಿ ಪಾಲ್ಗೊಳ್ಳಲು ದೊಡ್ಡ ಪ್ರಮಾಣದಲ್ಲಿ ಹೊರಟು ನಿಂತರು. ಟಿಕೆಟ್ ಇಲ್ಲದೆ ಪ್ರಯಾಣ ಮಾಡಲು ಸಜ್ಜಾಗಿದ್ದ ರೈತರನ್ನು ಬಂಧಿಸಲಾಯಿತು. ಇದರಿಂದ 2500 ರೈತರು ರೈಲ್ವೆ ನಿಲ್ದಾಣದಲ್ಲಿ ಸೇರಿ ರೈಲ್ವೆ ಅತಿಥಿಗೃಹಕ್ಕೆ ಮೆರವಣಿಗೆಯಲ್ಲಿ ತೆರಳಿದರು. ಅಲ್ಲಿ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ಮಂಡ್ಯ ಜಿಲ್ಲೆಯ ರೈತಸಂಘದ ನಾಯಕರು ಭಾಷಣ ಮಾಡಿ ರೈತರೆಲ್ಲರೂ ತಮಗೆ ಪ್ರವಾಸ ಮಾಡಲು ಸ್ಥಳಾವಕಾಶ ನೀಡುವವರೆಗೆ ಧರಣಿ ಮಾಡಬೇಕೆಂದು ಹೇಳಿದರು. ಪೊಲೀಸರು ದಸ್ತಗಿರಿ ಮಾಡಿದರೆ ರೈತರು ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿ ರಸ್ತೆ ತಡೆ ಚಳುವಳಿ ನಡೆಸಬೇಕೆಂದು ಕರೆ ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ದಿನಾಂಕ 01–03–1993ರ ವಿಧಾನಸಭಾ ಅಧಿವೇಶನದಲ್ಲಿ ಚರ್ಚೆಯಾಯಿತು. ವೈ.ಕೆ.ರಾಮಯ್ಯ ಮಾತನಾಡಿ ರಾಷ್ಟ್ರದ ಈಗಿನ ಕೃಷಿ ನೀತಿಯಿಂದಾಗಿ ಈ ದೇಶದ

---

[6] ಭಾರತ ಮತ್ತು ಗ್ಯಾಟ್ ಒಪ್ಪಂದ ಡಂಕಲ್ ಪ್ರಸ್ತಾವನೆ. (1994). ಕೃಷಿರಣ, ಕರ್ನಾಟಕ ಸರ್ಕಾರ. ಪು.25–37.

[7] ಸವಿತ.ಬಿ.ಸಿ. (2010). *ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು.18.

ರೈತನಿಗೆ ಕೆಟ್ಟದಾಗುತ್ತಿದೆ. ಹೀಗಾಗಿ ಡೆಂಕೆಲ್ ಪ್ರಸ್ತಾವನೆ ವಿರುದ್ಧ ಪ್ರತಿಭಟನೆ ಮಾಡಲು ದೆಹಲಿಗೆ ಹೊರಟಿರುವ ರೈತರನ್ನು ಬಂಧಿಸಿ ಜೈಲಿನಲ್ಲಿಡುವ ಬದಲು ರಾಜ್ಯದ ರೈತರ ಬಗ್ಗೆ ಕಾಳಜಿ ಇದ್ದರೆ ಒಂದು ವಿಶೇಷ ರೈಲನ್ನು ಮಾಡಿ ದೆಹಲಿಗೆ ಕಳುಹಿಸುವಂತೆ ಒತ್ತಾಯಿಸಿದರು.[8] ಹೀಗೆ ದೇಶದ ವಿವಿದೆಡೆಯಿಂದ ದೆಹಲಿಗೆ ಬಂದಿದ್ದ ರೈತರು ಡೆಂಕಲ್ ನೀತಿ ವಿರೋಧಿಸಿ ಅದರ ಪ್ರಸ್ತಾವನೆಯ ಪ್ರತಿಯನ್ನು ಸುಡುವ ಮೂಲಕ ಪ್ರತಿಭಟಿಸಿದರು. ಈ ಸಮಾವೇಶದಲ್ಲಿ ನಂಜುಂಡಸ್ವಾಮಿ, ಶಿವಸ್ವಾಮಿ, ಮಹೇಂದ್ರಸಿಂಗ್ ಟಿಕಾಯತ್, ಮೇಧಾ ಪಾಟ್ಕರ್, ವಂದನಾಶಿವ ಮುಂತಾದವರು ಪಾಲ್ಗೊಂಡಿದ್ದರು. ಆಮದಿನ ವಿಚಾರದಲ್ಲಿ ಭಾರತವು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು ಹಾಗೂ ಬೌದ್ಧಿಕ ಆಸ್ತಿಯ ಮೇಲಿನ ಹಕ್ಕು, ಗ್ಯಾಟ್ ಒಪ್ಪಂದದ ಭಾಗವಾಗಬಾರದೆಂದು ಈ ಸಮಾವೇಶವು ಸರ್ಕಾರವನ್ನು ಒತ್ತಾಯಿಸಿತು.

**ಕಾರ್ಗಿಲ್ ಬೀಜ ಕಂಪನಿಗಳ ಮೇಲಿನ ದಾಳಿ 1992–93**

ರೈತ ಸಂಘಟನೆಗಳ ಪ್ರಬಲ ವಿರೋಧದ ನಡುವೆಯೂ ಭಾರತವು ನೂತನ ಆರ್ಥಿಕ ನೀತಿಯನ್ನು ಒಪ್ಪಿಕೊಂಡು ಅಳವಡಿಸಿಕೊಂಡ ಪರಿಣಾಮವಾಗಿ ಹಲವಾರು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಭಾರತವನ್ನು ಪ್ರವೇಶಿಸಿದವು. ಅವುಗಳಲ್ಲಿ ಅಮೇರಿಕಾ ಮೂಲದ ಕಾರ್ಗಿಲ್ ಮತ್ತು ಮಾನ್ಸಾಂಟೋ ಬೀಜ ಕಂಪನಿಗಳು ಪ್ರಮುಖವಾದವು. ಕಾರ್ಗಿಲ್ ಕಂಪನಿ ಕರ್ನಾಟಕದಲ್ಲಿ ಬೆಂಗಳೂರು, ಬಳ್ಳಾರಿ ಮುಂತಾದ ಕಡೆಗಳಲ್ಲಿ ಸ್ಥಾಪಿತವಾಗಿತ್ತು. ಈ ಕಂಪನಿಗಳು ಭಾರತದಲ್ಲಿ ಬೀಜ ಉತ್ಪಾದನೆಯಲ್ಲಿ ತೊಡಗಿ ರೈತರನ್ನು ವಂಚಿಸುತ್ತಿದ್ದವು. ಇವು ದೇಶೀಯ ಬಿತ್ತನೆ ಬೀಜ ಸಂಸ್ಕೃತಿಯನ್ನು ನಾಶ ಮಾಡುವ ಹುನ್ನಾರ ಮಾಡುತ್ತಿದ್ದವು. ಇದರಿಂದಾಗಿ ದೇಶೀಯ ರೈತರು ಹೊರದೇಶಗಳ ಬೀಜ, ಗೊಬ್ಬರ, ಕೀಟನಾಶಕಗಳನ್ನು ಆಶ್ರಯಿಸಿ, ವಿದೇಶಿ ಕಂಪನಿಗಳ ಗುಲಾಮರಾಗಬಹುದಾದ ಅಪಾಯವಿತ್ತು. ಇದನ್ನು ಗಮನಿಸಿದ ಕರ್ನಾಟಕ ರಾಜ್ಯ ರೈತ ಸಂಘ ನೇರ ಕಾರ್ಯಾಚರಣೆಗಿಳಿದಿತ್ತು. ಬೆಂಗಳೂರಿನ ಸೈಂಟ್ ಮಾರ್ಕ್ಸ್ ರಸ್ತೆ, ಸೋಫಿಯಾಸ್ ಚಾಯ್ಸ್ ಕಟ್ಟಡದಲ್ಲಿ ಇದ್ದ ಕಛೇರಿಯ ಮೇಲೆ ದಿನಾಂಕ 29–12–1992ರಂದು ಸಾವಿರಕ್ಕೂ ಹೆಚ್ಚು ರೈತರು ದಾಳಿ ಮಾಡಿ, ಕಛೇರಿಗೆ ಬೀಗ ಹಾಕಿ ಪ್ರತಿಭಟಿಸಿದರು. ಅದೇ ರೀತಿ ನಿರ್ಮಾಣ ಹಂತದಲ್ಲಿದ್ದ ಬಳ್ಳಾರಿಯ ಕಾರ್ಗಿಲ್ ಬೀಜ ಉತ್ಪಾದನೆ ಘಟಕದ ಮೇಲೆ ಬಳ್ಳಾರಿ ಜಿಲ್ಲಾ ರೈತಘಟಕ 1993ರ ಜುಲೈ 12ರಂದು ದಾಳಿ ಮಾಡಿತು. ಈ ಎಲ್ಲಾ ಹೋರಾಟಗಳ ನಡುವೆ 1993ರ ಅಕ್ಟೋಬರ್ 2 ರಂದು ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿ ಅಂತರರಾಷ್ಟ್ರೀಯ ರೈತ ಸಮಾವೇಶವನ್ನು ಏರ್ಪಾಟು ಮಾಡಲಾಗಿತ್ತು. ಹತ್ತು ಲಕ್ಷಕ್ಕೂ ಅಧಿಕ ಸಂಖ್ಯೆಯ ರೈತರು ದೇಶದ ನಾನಾ ಭಾಗಗಳಿಂದ ಬಂದು ಪಾಲ್ಗೊಂಡಿದ್ದ ಈ ಸಮಾವೇಶದಲ್ಲಿ ಶ್ರೀಲಂಕಾ, ಮಲೇಷಿಯಾ, ಜಿಂಬಾಬ್ವೆ, ಇಂಡೋನೇಷಿಯಾ ಸೇರಿದಂತೆ 15 ರಾಷ್ಟ್ರಗಳ ರೈತ ಮುಖಂಡರು ಹಾಗೂ ವಿಜ್ಞಾನಿಗಳು ಪಾಲ್ಗೊಂಡಿದ್ದರು. ಟಿಕಾಯತ್, ವಂದನಾಶಿವ, ಮೇಧಾಪಾಟ್ಕರ್, ಶಿವಸ್ವಾಮಿ ಮುಂತಾದ ರೈತಪರ ಹೋರಾಟಗಾರರು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ಬೀಜ ಸತ್ಯಾಗ್ರಹ ಚಳುವಳಿಗೆ ಹೊಸ ರೂಪ ನೀಡಿ ಜಗತ್ತಿನಾದ್ಯಂತ ವ್ಯಾಪಕಗೊಳಿಸುವ ಪ್ರಯತ್ನವನ್ನು ಮಾಡಲಾಯಿತು. ಅದೇ ರೀತಿ ಬೆಂಗಳೂರಿನ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿದ್ದ ಯೂನಿಯನ್ ಕಾರ್ಬೈಡ್‌ಇಂಡಿಯಾ ಲಿಮಿಟೆಡ್ ಎಂಬ

[8] ನಾಗರಾಜ್ ಎಂ.ಜಿ. (2006). *ಕನಾಟಕ ರೈತ ಚಳುವಳಿ, ಸತ್ಯಾಗ್ರಹಗಳು.* ಸಂಪುಟ–2, ವಿಧಾನಮಂಡಲ ಗ್ರಂಥಾಲಯ ಸಮಿತಿ, ವಿಧಾನ ಸೌಧ. ಪು.403–404.

ಕಂಪನಿಯ ಮೇಲೆ ಏಪ್ರಿಲ್ 15, 1994 ದಾಳಿ ಮಾಡಿ ಪ್ರತಿಭಟನೆ ಮಾಡಲಾಯಿತು.[9] ರೈತ ಸಂಘದ ಈ ರೀತಿಯ ಹೋರಾಟಗಳು ಕೃಷಿಯಲ್ಲಿ ರೈತರ ಸ್ವಾವಲಂಬನೆ ಹಾಗೂ ಸ್ವದೇಶಿತನವನ್ನು ಉಳಿಸುವ ಆಶಯ ಹೊಂದಿದ್ದವು.

**ಸ್ವದೇಶಿ ಬಿತ್ತನೆ ಬೀಜ ಮಾರಾಟ ಚಳುವಳಿ**

ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಬಿತ್ತನೆ ಬೀಜಗಳನ್ನು ತಿರಸ್ಕರಿಸಿ ಹೋರಾಟ ಮಾಡಿದ ಕರ್ನಾಟಕ ರಾಜ್ಯ ರೈತ ಸಂಘ ಅದಕ್ಕೆ ಪರ್ಯಾಯವಾಗಿ ಸ್ವದೇಶಿ ಬೀಜ ಮಾರಾಟ ಚಳುವಳಿ ರೂಪಿಸಿತು. ದಿನಾಂಕ 16–04–1994ರಂದು ಬೆಂಗಳೂರಿನಲ್ಲಿ ಈ ಚಳುವಳಿ ನಡೆಯಿತು. ಅಂದು ರಾಜ್ಯಾದ್ಯಂತ ತಾಲ್ಲೂಕು ಹಂತದಲ್ಲಿ ಚಳುವಳಿಯ ಅಂಗವಾಗಿ ಸಾಂಕೇತಿಕ ಪ್ರತಿಭಟನೆಯನ್ನು ಕೈಗೊಳ್ಳುವಂತೆ ರೈತ ಸಂಘ ಕರೆಕೊಟ್ಟಿತ್ತು. ಈ ಹೋರಾಟದ ದಿನದಂದು ರಾಜ್ಯ ಸರ್ಕಾರದ ಅಂದಿನ ಕೃಷಿ ಸಚಿವ ಎಚ್.ಎಂ. ರೇವಣ್ಣನವರಿಗೆ ನಂಜುಂಡಸ್ವಾಮಿ ಸ್ವದೇಶಿ ಬಿತ್ತನೆ ಬೀಜದ ಪೊಟ್ಟಣವನ್ನು ಎರಡು ರೂಗಳಿಗೆ ಮಾರಾಟ ಮಾಡುವ ಮೂಲಕ ಈ ಚಳುವಳಿ ಚಾಲನೆ ನೀಡಿದರು.[10] ಇದರೊಂದಿಗೆ ಬಿತ್ತನೆ ಬೀಜ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಈ ಹೋರಾಟವನ್ನು ದೇಶದಾದ್ಯಂತ ವಿಸ್ತರಿಸುವ ಆಲೋಚನೆಯನ್ನು ರೈತ ಸಂಘ ಹೊಂದಿತ್ತು. ಕರ್ನಾಟಕ ರಾಜ್ಯ ರೈತ ಸಂಘ 'ನಮ್ದು ಬ್ರಾಂಡ್' ಎಂಬ ನಾಟಿ ಜೋಳದ ಪ್ಯಾಕೆಟ್ಟನ್ನು ಎರಡು ರೂಪಾಯಿಗಳಿಗೆ ಅಂದು ಮಾರಾಟ ಮಾಡಿತು.

**ಕೆ.ಎಫ್.ಸಿ ಮಳಿಗೆ ಮೇಲೆ ದಾಳಿ–1996**

ಕೆಂಟುಕಿ ಫ್ರೈಡ್ ಚಿಕನ್ ಅಮೇರಿಕಾ ಮೂಲದ ಬಹುರಾಷ್ಟ್ರೀಯ ಕಂಪನಿಯ ಚಿಕನ್ ರೆಸ್ಟೋರೆಂಟ್ ಆಗಿದ್ದು, ಭಾರತದಲ್ಲಿ ತನ್ನ ಮೊಟ್ಟಮೊದಲ ಮಳಿಗೆಯನ್ನು 1995ರಲ್ಲಿ ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ತೆರೆದಿತ್ತು. ಅದೇ ರೀತಿ ಫಿಜ್ಜಾಹಟ್ ಹಾಗೂ ಮ್ಯಾಕ್‌ಡೊನಾಲ್ಡ್ ಮಳಿಗೆಗಳು ಅದೇ ವರ್ಷದ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡಲಿದ್ದವು. ಅಂದಿನ ಸರ್ಕಾರ ವಿದೇಶಿ ಬಂಡವಾಳ ಹೂಡಿಕೆಯ ಹೆಸರಿನಲ್ಲಿ ಇದಕ್ಕೆ ಹೆಚ್ಚಿನ ಒಲವನ್ನು ತೋರಿತ್ತು. ಈ ರೀತಿಯ ಆಹಾರದಲ್ಲಿ ಮೊನೋಸೋಡಿಯಂ ಗ್ಲುಟಾಮೇಟ್ ಎಂಬ ರಾಸಾಯನಿಕ ಹೆಚ್ಚು ಇದ್ದು, ಇದು ಮಾನವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಅಲ್ಲದೆ ಈ ಆಹಾರ ಸೇವನೆಯಿಂದಾಗಿ ಬೊಜ್ಜು, ರಕ್ತದಲ್ಲಿ ಕೊಲೆಸ್ಟ್ರಾಲ್ ಹೆಚ್ಚಳ ಮತ್ತು ಕ್ಯಾನ್ಸರ್‌ಗೆ ತುತ್ತಾಗುವ ಬೀತಿ ಇತ್ತು. ಅಮೇರಿಕಾದ ಸೆನೆಟ್‌ನ ವರದಿ ಪ್ರಕಾರ ಜಂಕ್ ಫುಡ್‌ನ ಸೇವನೆಯಿಂದಾಗಿ ಅಮೇರಿಕಾದ 7 ಜನರಲ್ಲಿ ಒಬ್ಬ ಕ್ಯಾನ್ಸರ್ ರೋಗಕ್ಕೆ ತುತ್ತಾಗಿರುವುದು ಸಾಬೀತಾಗಿತ್ತು.[11] ಈ ಎಲ್ಲಾ ಕಾರಣಗಳಿಂದಾಗಿ ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘ ಕೆ.ಎಫ್.ಸಿ ವಿರುದ್ಧ ಹೋರಾಟ ಪ್ರಾರಂಭಿಸಿತು. ಮಳಿಗೆಯನ್ನು ಮುಚ್ಚುವಂತೆ ಅದರ ಮಾಲಿಕರಿಗೆ ಪತ್ರ ಬರೆದು 7 ದಿನಗಳ ಕಾಲಾವಕಾಶ ನೀಡಲಾಯಿತು. ಇಲ್ಲಿ ರೈತರ ಅಂತಿಮ ವೈರಿ ಹಾಗೂ ಅವರ ವಿರೋಧದ ಗುರಿ ಭಾರತದ

[9] ಟೈಮ್ಸ್ ಆಫ್ ಇಂಡಿಯಾ. ( 1994, ಏಪ್ರಿಲ್ 16). ದಿನಪತ್ರಿಕೆ

[10] ಸಂಯುಕ್ತ ಕರ್ನಾಟಕ. (1994, ಏಪ್ರಿಲ್ 17).

[11] ದಿ ಹಿಂದೂಸ್ತಾನ್ ಟೈಮ್ಸ್. (1995, ಆಗಸ್ಟ್ 1)

ಅರ್ಥವ್ಯವಸ್ಥೆಯನ್ನು ಹಾಳುಗೆಡೆವುತ್ತಿದ್ದ ಬಹುರಾಷ್ಟ್ರೀಯ ಕಂಪನಿಗಳಾಗಿದ್ದವೇ ವಿನಃ ಕೇವಲ ಕೆಂಟುಕಿ ಫ್ರೈಡ್ ಚಿಕನ್ ಮಳಿಗೆಯಲ್ಲ. ಹೀಗಾಗಿ ಗಾಂಧೀಜಿ ಹುತಾತ್ಮರಾದ ದಿನದ ನೆನಪಿನಲ್ಲಿ ದಿನಾಂಕ 30–01–1996 ರಂದು ರೈತ ಸಂಘ ಕೆ.ಎಫ್.ಸಿ ಮಳಿಗೆ ಮೇಲೆ ದಾಳಿ ಮಾಡಿತು. ಈ ಹೋರಾಟದಲ್ಲಿ ಕನ್ನಡ ಪರ ಸಂಘಟನೆಗಳೂ ಭಾಗಿಯಾಗಿದ್ದವು. ಈ ಹೋರಾಟದಲ್ಲಿ ಮಂಡ್ಯ ಜಿಲ್ಲೆಯ ರೈತರೇ ಅಧಿಕ ಸಂಖ್ಯೆಯಲ್ಲಿದ್ದರು.[12] ಮಳಿಗೆಯಲ್ಲಿದ್ದ ಗ್ರಾಹಕರನ್ನು ಹೊರ ಹೋಗುವಂತೆ ಹೇಳಿ ನಂತರ ಮಳಿಗೆಗೆ ಮುತ್ತಿಗೆ ಹಾಕಲಾಯಿತು. ಪ್ರತಿಭಟನೆಯ ನಂತರ ಘೋಷಣೆ ಕೂಗುತ್ತಾ ವಿಧಾನಸೌಧದತ್ತ ಮೆರವಣಿಗೆ ಸಾಗುತ್ತಿದ್ದ ಪ್ರತಿಭಟನಾಕಾರರನ್ನು ಸರ್ಕಾರ ಬಂಧಿಸಿ ಸೆಂಟ್ರಲ್ ಜೈಲಿನಲ್ಲಿ ಇಟ್ಟಿತು.[13] ಈ ರೀತಿಯ ಹೋರಾಟಕ್ಕೆ ಪರಿಸರವಾದಿ ಮೇನಕಾ ಗಾಂಧಿ, ವಂದನಾಶಿವ ಮುಂತಾದವರು ಬೆಂಬಲ ವ್ಯಕ್ತಪಡಿಸಿದ್ದರು.

**ಅಮೇರಿಕಾದ ಕೊಜೆಂಟ್ರಿಕ್ ಸಂಸ್ಥೆ ವಿರುದ್ಧದ ಹೋರಾಟ–1996**

ಅಮೇರಿಕಾ ಮೂಲಕ ಕೊಜೆಂಟ್ರಿಕ್ ಸಂಸ್ಥೆ ಉಡುಪಿಯ ಬಳಿ ಇರುವ ನಂದಿಕೂರಿನಲ್ಲಿ ವಿದ್ಯುತ್ ಸ್ಥಾವರ ಸ್ಥಾಪಿಸುವ ಉದ್ದೇಶ ಹೊಂದಿತ್ತು. 1992ರಲ್ಲೇ ಈ ಯೋಜನೆಯ ಬಗ್ಗೆ ಮಾತು ಕೇಳಿ ಬಂದವು. ಈ ಯೋಜನೆಗಾಗಿ 1000 ಎಕೆರೆ ಕೃಷಿ ಭೂಮಿ ಮತ್ತು ಸುಮಾರು 540 ಕುಟುಂಬಗಳು ಮನೆ ಹಾಗೂ ಭೂಮಿಯನ್ನು ಕಳೆದುಕೊಳ್ಳುವ ಭೀತಿಗೆ ಒಳಗಾದವು. ಇದರಿಂದ ಪರಿಸರಕ್ಕೂ ಧಕ್ಕೆಯಾಗುತ್ತಿತ್ತು. ಹೀಗಾಗಿ ಇದರ ವಿರುದ್ದ 1996ರಲ್ಲಿ ನಡೆದ ಹೋರಾಟದಲ್ಲಿ ಪರಿಸರವಾದಿ ಮೇನಕಾ ಗಾಂಧಿ, ರೈತ ಸಂಘದ ನಂಜುಂಡಸ್ವಾಮಿ ಮತ್ತಿತ್ತರ ನಾಯಕರು ಮತ್ತು ಸ್ಥಳೀಯ ರೈತರು ಪಾಲ್ಗೊಂಡರು.[14] ಇದರ ಪರಿಣಾಮವಾಗಿ ಈ ಯೋಜನೆ ಸ್ಥಗಿತಗೊಂಡಿತು.

1996ರ ಏಪ್ರಿಲ್‌ನಲ್ಲಿ ಮೆಕ್ಸಿಕೋದ ಟ್ಲಾಕ್ಸ್‌ಕಾಲದಲ್ಲಿ ನಡೆದ ಲಾವಿಯಾ ಕ್ಯಾಂಪೆಸಿನಾಗೆ ಆಹ್ವಾನದ ಮೇಲೆ ತೆರಳಿದ್ದ ನಂಜುಂಡಸ್ವಾಮಿ ಅವರಿಗೆ ಈ ಸಮ್ಮೇಳನ ಜಾಗತಿಕ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿತು. ಸರ್ವಾನುಮತದ ಮೇರೆಗೆ ಅಂತರರಾಷ್ಟ್ರೀಯ ರೈತ ಚಳುವಳಿಯ ದಕ್ಷಿಣ ಏಷ್ಯಾದ ಕೋ ಆರ್ಡಿನೇಟರ್ ಆಗಿ ಅವರು ನೇಮಕಗೊಂಡರು. ಹೀಗಾಗಿ ಅವರು ಪದೇ ಪದೇ ವಿದೇಶ ಪ್ರವಾಸ ಮಾಡುವುದು ಅನಿವಾರ್ಯವಾಗಿತ್ತು. ಇದು ಕರ್ನಾಟಕ ರಾಜ್ಯ ರೈತ ಸಂಘದ ಹಲವರ ಕೋಪಕ್ಕೆ ಕಾರಣವಾಗಿ ಕರ್ನಾಟಕ ರಾಜ್ಯ ರೈತ ಸಂಘ ಅಧ್ಯಕ್ಷರು ಹೆಚ್ಚಾಗಿ ಅಂತರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಮಾತ್ರ ಹೆಚ್ಚು ಗಮನ ಹರಿಸುತ್ತಿದ್ದಾರೆ. ಮತ್ತು ಸ್ಥಳೀಯ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ ನಂಜುಂಡಸ್ವಾಮಿಗೆ ಫಾರಿನ್ ಹುಚ್ಚು ಎಂಬ ಆಪಾದನೆಯನ್ನು ಅವರು ಎದುರಿಸಬೇಕಾಯಿತು.

**ವಿಶ್ವ ಸುಂದರಿ ಸ್ಪರ್ಧೆ ವಿರುದ್ಧದ ಹೋರಾಟ–1996**

1996 ನವೆಂಬರ್ 5 ರಂದು ಬೆಂಗಳೂರಿನಲ್ಲಿ ನಡೆದ ವಿಶ್ವ ಸುಂದರಿ ಸ್ಪರ್ಧೆ ವಿರುದ್ಧ ಪ್ರತಿಭಟಿಸಿದ ರೈತ ಸಂಘ ಈ ಕಾರ್ಯಕ್ರಮವನ್ನು ರದ್ದು ಮಾಡುವಂತೆ ಒತ್ತಾಯಿಸಿ, ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದಿಂದ

---

[12] ಸಂದರ್ಶನ: ಸುನಂದಾ ಜಯರಾಮ್, ರೖತ ನಾಯಕಿ, ಮಂಡ್ಯ ದಿನಾಂಕ 28–06–2019.

[13] ಅಗ್ರಹಾರ ಕೃಷ್ಣಮೂರ್ತಿ (ಸಂ.). (2002). ಸಂಸ್ಕೃತಿ ಕಥನ. ಕನ್ನಡ ಪುಸ್ತಕ ಪ್ರಾಧಿಕಾರ. ಪು.261–262.

[14] ಮೋಹನ ಕೃಷ್ಣ ರೈ. ಕೆ. (2018). *ಪರಿಸರ ಚಳುವಳಿಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು.236–237.

ಮಹಾತ್ಮಗಾಂಧಿ ಪ್ರತಿಮೆಯವರಗೆ ಮೆರವಣಿಗೆ ಮಾಡಿ, ಧರಣಿ ನಡೆಸಿತು. ಇದು ಪಾಶ್ಚಿಮಾತ್ಯ ದೇಶಗಳ ಸಂಸ್ಕೃತಿಯನ್ನು ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಹೇರುವ ಹುನ್ನಾರ ಎಂದು ವ್ಯಾಖ್ಯಾನಿಸಿದ ಸಂಘದ ಅಧ್ಯಕ್ಷರಾದ ನಂಜುಂಡಸ್ವಾಮಿ ಸೌಂದರ್ಯ ಸ್ಪರ್ಧೆಯ ವಿರುದ್ಧ ಪ್ರತಿಭಟನೆ ನಡೆಸಲು ಎಲ್ಲಾ ಮಹಿಳಾ ಸಂಘಟನೆಗಳ ಬೆಂಬಲ ಕೋರಿದರು. ಹಾಗೂ ಅಂತಹ ಸ್ಪರ್ಧೆಯಲ್ಲಿ ಭಾಗವಹಿಸದಿರುವಂತೆ ಮಹಿಳೆಯರನ್ನು ಒತ್ತಾಯಿಸಿದರು. ಹಾಗೂ ಸರ್ಕಾರದ ಕಾರ್ಯಕ್ರಮಗಳಿಗೆ ಮೀಸಲಾಗಿರುವ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣವನ್ನು ಅಮಿತಾಬಚ್ಚನ್ ಕಾರ್ಪೋರೇಷನ್ನಿನ ಪತ್ರಿಕಾ ಸಮ್ಮೇಳನ ನಡೆಸಲು ಕೊಡುವ ತೀರ್ಮಾನವನ್ನು ತೀವ್ರವಾಗಿ ವಿರೋಧಿಸಿ ಇದು ಸಂವಿಧಾನಕ್ಕೆ ವಿರುದ್ಧವಾದ ನಡವಳಿಕೆ ಎಂದು ಖಂಡಿಸಿದರು.[15]

ಇದೇ ರೀತಿ 1996ರ ನವೆಂಬರ್‌ನಲ್ಲಿ ರೋಮ್‌ನಲ್ಲಿ ವಿಶ್ವ ಆಹಾರ ಸಂಸ್ಥೆಯ ನೇತೃತ್ವದಲ್ಲಿ ನಡೆದಿದ್ದ ವಿಶ್ವ ಆಹಾರ ಸಮ್ಮೇಳನದ ವಿರುದ್ಧ ಪ್ರತಿಭಟನೆ, ರೈತರ ಹಕ್ಕುಗಳನ್ನು ಪ್ರತಿಪಾದಿಸಲು ದಿನಾಂಕ 30–01–1997ರಲ್ಲಿ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಸಮಾವೇಶ. ಬಹುರಾಷ್ಟ್ರೀಯ ಕಂಪನಿಗಳನ್ನು ದೇಶದಿಂದ ಹೊರ ಹಾಕಲು ದೆಹಲಿಯ ಕೆಂಪುಕೋಟೆ ಮೈದಾನದಲ್ಲಿ 1998 ಸೆಪ್ಟೆಂಬರ್ 21 ರಂದು ನಡೆದ ಅಖಿಲಭಾರತ ರೈತ ಸಮಾವೇಶ, 1998ರಲ್ಲಿ ಬಿ.ಟಿ.ಹತ್ತಿ ಕಂಪನಿ ಮಾನ್ಸಾಂಟೋ ವಿರುದ್ಧ ಆಪರೇಷನ್ ಕ್ರಿಮೇಷನ್ ಮಾನ್ಸಾಂಟೋ ಹೋರಾಟ. ಅಮೇರಿಕಾದ ಸಿಯಾಟಲ್‌ನ ಮೂರನೇ ಶೃಂಗಸಭೆ ವಿರೋಧಿಸಿ 1999 ನವೆಂಬರ್ 30 ರಂದು ಬೆಂಗಳೂರಿನ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ, ವಿವಿಧ ತಳಿಗಳ ರಕ್ಷಣೆ ಕಾಯ್ದೆ–2000 ಖಂಡಿಸಿ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ದಿನಾಂಕ

ಅಕ್ಟೋಬರ್ 02, 2000 ರಂದು ಸಮಾವೇಶವನ್ನು ರೈತ ಸಂಘ ನಡೆಸಿತು. ಜೊತೆಗೆ ಲಾವಿಯಾ ಕ್ಯಾಂಪಸೀನಾ ಮೂರನೇ ವಿಶ್ವ ಸಮ್ಮೇಳನವನ್ನು ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ಅಕ್ಟೋಬರ್ 3 ರಿಂದ 6 ರವರೆಗೆ ಆಯೋಜಿಸಿತು. ಕೃಷಿ ಆಮದು ನೀತಿ ವಿರೋಧಿಸಿ ಕಾಶ್ಮೀರ ಹಾಗೂ ಕನ್ಯಾಕುಮಾರಿಯಲ್ಲಿ ಏಕಕಾಲದಲ್ಲಿ ದಿನಾಂಕ 19–01–2001 ರಿಂದ ದಿನಾಂಕ 19–02–2001 ರವರೆಗೆ ಆಯೋಜಿಸಿದ್ದ ಬಂಡಿಯಾತ್ರೆಯ ಸಂದರ್ಭದಲ್ಲಿ ಡೆಂಕಲ್ ಪ್ರಸ್ತಾವನೆ, ಗ್ಯಾಟ್ ಒಪ್ಪಂದ, ಡಬ್ಲ್ಯೂ.ಟಿ.ಓ ಇವುಗಳಿಂದ ಭಾರತೀಯ ರೈತರ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ಕುರಿತು ಜಾಗೃತಿ ಮೂಡಿಸಿತು.

### ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯ್ಯೂ.ಟಿ.ಓ) ವಿರುದ್ಧದ ಪ್ರತಿಭಟನೆ–2000

ಕೃಷಿ ವಲಯವನ್ನು ವಿಶ್ವ ವಾಣಿಜ್ಯ ಸಂಸ್ಥೆಯ (ಡಬ್ಲ್ಯ್ಯೂ.ಟಿ.ಓ) ಒಪ್ಪಂದದಿಂದ ಕೈಬಿಡಬೇಕು ಎಂಬುದು ಕರ್ನಾಟಕ ರಾಜ್ಯ ರೈತ ಸಂಘದ ಬಹು ದೊಡ್ಡ ಆಗ್ರಹವಾಗಿತ್ತು. ಹೀಗಾಗಿ ದಿನಾಂಕ 11–11–2000 ದಂದು ಡಬ್ಲ್ಯ್ಯೂ.ಟಿ.ಓ ಸೆಲ್ ಸಭೆಯಲ್ಲಿ ವಿಶ್ವವಾಣಿಜ್ಯ ಒಪ್ಪಂದದ ಪರಿಣಾಮಗಳ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಕೃಷಿ ಸಚಿವ ಟಿ.ಬಿ.ಜಯಚಂದ್ರ ಆ ಒಪ್ಪಂದದ ಪ್ರತಿಕೂಲ ಪರಿಣಾಮ ಹಾಗೂ ಕೃಷಿ ಉತ್ಪನ್ನಗಳ ಬೆಲೆ ಕುಸಿತ ಕುರಿತು ಚರ್ಚಿಸಿ ಸೂಕ್ತ ಕ್ರಮಕ್ಕಾಗಿ ಸಲಹೆ ನೀಡುವಂತೆ ಸಭೆಯಲ್ಲಿ ಪ್ರಸ್ತಾಪ ಮಂಡಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಎಂ.ಡಿ.ನಂಜುಂಡಸ್ವಾಮಿ ವಿಶ್ವವಾಣಿಜ್ಯ

[15]ಕುಮಾರ್ ಕೆ. ಎಂ. (2008). *ಕರ್ನಾಟಕದಲ್ಲಿನ ರೈತ ಚಳುವಳಿ*. ಕನ್ನಡ ಸಾಹಿತ್ಯ ಪರಿಷತ್ತು. ಪು.180–181.

ಒಪ್ಪಂದದಿಂದ ರೈತರಿಗೆ ಪ್ರಯೋಜನವೇನಾಗಿದೆ? ಕಳೆದ 6 ವರ್ಷಗಳ ಅನುಭವದಿಂದ ಹೇಳುವುದಾದರೆ ನಮಗೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗಿದೆ. ಪ್ರತಿಕೂಲ ಪರಿಣಾಮ ತಡೆವ ಶಕ್ತಿ ನಮಗೆ ಇಲ್ಲವಾಗಿದೆ. ದೇಶಿಯ ಮಾರುಕಟ್ಟೆಗೆ, ಸಣ್ಣ ರೈತರಿಗೆ ಇದರಿಂದ ಪ್ರಯೋಜನವಿಲ್ಲದಂತಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ರೈತರ ಪರ ನಂಜುಂಡಸ್ವಾಮಿ ಆಡಿದ ಮಾತನ್ನು ಡಬ್ಲ್ಯೂ.ಟಿ.ಓ ಸೆಲ್‌ನ ಸದಸ್ಯರು ಟೀಕಿಸುತ್ತಾ ರೈತರಿಗೆ ಈಗಾಗಲೇ ಸಾಕಷ್ಟು ಸವಲತ್ತು ನೀಡಲಾಗಿದೆ ಎಂದರು. ಗ್ರಾಹಕರ ಕಡೆಗೆ ಗಮನವನ್ನು ಹರಿಸುತ್ತಿಲ್ಲ ಎಂಬುದರ ಬಗ್ಗೆ ರೈತ ಪರ ಆಹ್ವಾನಿತ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ಹಾಲು, ಸಕ್ಕರೆ ಇತ್ಯಾದಿಗಳ ಬೆಲೆ ಏರುಪೇರಾಗಿದೆ ಎಂದರು. ಕರ್ನಾಟಕ, ಪಂಜಾಬ್‌ಗಳಲ್ಲಿ ಭತ್ತ ಹಾಳಾಗಿದೆ. ಭತ್ತದ ದರ ಕುಸಿತದಿಂದ ರೈತರು ಮುಂಬರುವ ವರ್ಷಗಳಲ್ಲಿ ಬೆಳೆಯುವುದನ್ನು ನಿಲ್ಲಿಸುತ್ತಾರೆ. ಆಗ ವಿದೇಶಿ ಭತ್ತವನ್ನೇ ನಂಬಿ ಕೂರಲಾಗುತ್ತದೆಯೆ? ಎಂದರು. ನಂಜುಂಡಸ್ವಾಮಿ ಘಖಿಔ ಜಾರಿಯಿಂದ ಭಾರತದಲ್ಲಿ 50ಕೋಟಿ ರೈತರು ಬೀದಿ ಪಾಲಾಗುತ್ತಾರೆ. ಇವರಿಗೆ ಪರ್ಯಾಯ ನೆರವು ಏನು ನೀಡುತ್ತೀರಿ ಎಂದು ಪ್ರಶ್ನಿಸಿದರು. ಸಭೆಯಲ್ಲಿ ಸಚಿವ ಅಲ್ಲಂ ವೀರಭದ್ರಪ್ಪ, ಘಖಿಔ ಸೆಲ್‌ನ ಅಧ್ಯಕ್ಷ ಡಾ॥ಪ್ರೇಮನಾಥ್, ಸದಸ್ಯರಾದ ಡಾ॥ಆರ್.ಎಸ್.ದೇಶಪಾಂಡೆ, ಡಾ.ದ್ವಾರಕೀನಾಥ್ ಮುಖ್ಯ ಕಾರ್ಯದರ್ಶಿ ಟಿ.ಆರ್.ಸತೀಶ್ ಚಂದ್ರ, ಡಾ.ಬಿಸಲಯ್ಯನವರು ಪಾಲ್ಗೊಂಡಿದ್ದರು.[16]

**ಬಹುರಾಷ್ಟ್ರೀಯ ಕಂಪನಿ ಮಾನ್ಸಾಂಟೋ ವಿರುದ್ಧದ ಚಳುವಳಿ–2000 ಮತ್ತು 2002**

ಜನವರಿ 22, 2000 ದಂದು ನಂಜುಂಡಸ್ವಾಮಿ ಮಂಡ್ಯದಲ್ಲಿ ನಡೆದ ರೈತ ಸಂಘದ ಸಾರ್ವಜನಿಕ ಸಭೆಯಲ್ಲಿ ಮಾನ್ಸಾಂಟೋ ಕಂಪನಿಯ ಬಿತ್ತನೆ ಬೀಜಗಳಿಂದಾಗುವ ಅಪಾಯದ ವಿರುದ್ಧ ಹೋರಾಟಕ್ಕೆ ಕರೆಕೊಟ್ಟರು. ದಿನಾಂಕ 26–09–2000 ರಂದು ಪುಟ್ಟಣ್ಣಯ್ಯ ಬಣ ಸ್ವದೇಶಿ ಬೀಜ ಸಾರ್ವಭೌಮತ್ವಕ್ಕಾಗಿ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಲಾಲ್‌ಬಾಗ್‌ನಿಂದ ಮಲ್ಲೇಶ್ವರ ಮೈದಾನದವರೆಗೆ ಪ್ರತಿಭಟನಾ ಮೆರವಣಿಗೆ ಹಾಗೂ ರೈತರ ಸಮಾವೇಶ ನಡೆಸಿ ಪ್ರತಿಭಟಿಸಿತು. ನಂಜುಂಡಸ್ವಾಮಿ ಬಣ ದಿನಾಂಕ 02–10–2000 ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಕೇಂದ್ರದ ಕೃಷಿ ನೀತಿ ವಿರೋಧಿಸಿ ಹಾಗೂ ಮುಕ್ತ ಆಮದು ನೀತಿಯನ್ನು ಕೈಬಿಡುವಂತೆ ಆಗ್ರಹಿಸಿ ಬೃಹತ್ ಸಮಾವೇಶ ಏರ್ಪಡಿಸಿತ್ತು.

ಭಾರತದ ಜೈವಿಕ ವೈವಿಧ್ಯತೆಯನ್ನು ಹಾಳು ಮಾಡುತ್ತಿರುವ ಹಾಗೂ ಜನ, ಜಾನುವಾರುಗಳ ಆರೋಗ್ಯಕ್ಕೆ ಮಾರಕವಾಗಿರುವ ಬಹುರಾಷ್ಟ್ರೀಯ ಕಂಪನಿ ಮಾನ್ಸಾಂಟೋ ಬೀಜದ ಬೆಳೆ ಭಾರತಕ್ಕೆ ಸೂಕ್ತ ಬೆಳೆ ಅಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಅದರ ವಿರುದ್ಧ ಹೋರಾಟ ಆರಂಭಿಸಿತು. ಬಹುರಾಷ್ಟ್ರೀಯ ಕಂಪನಿಗಳು ಭಾರತದ ಕೃಷಿಯನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಮೂಲಕ ನಮ್ಮ ಸ್ವಾವಲಂಬನೆಯನ್ನು ನಾಶ ಮಾಡುವ ಸಂಚು ಹೂಡಿವೆ. ಈ ಕಂಪನಿಗಳ ಬಿ.ಟಿ ತಳಿಗಳ ವಂಶವಾಹಿ ವರ್ಗಾವಣೆ ನೈಸರ್ಗಿಕವಾಗಿಲ್ಲದ ಕಾರಣ ನಮ್ಮ ಜೈವಿಕ ವ್ಯವಸ್ಥೆ ನಾಶವಾಗುವ ಬಹುದೊಡ್ಡ ಅಪಾಯ ಇದೆ ಎಂದು ಎಚ್ಚರಿಸಿದ ಕರ್ನಾಟಕ ರಾಜ್ಯ ರೈತ ಸಂಘ, ಭಾರತೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿರುವ ಮಾನ್ಸಾಂಟೋ ಸೇರಿದಂತೆ ಬಹುರಾಷ್ಟ್ರೀಯ ಕಂಪನಿಗಳನ್ನು ತೆರವುಗೊಳಿಸುವಂತೆ ಹಾಗೂ

[16] ನಾಗರಾಜ್ ಎಂ.ಜಿ. (2006). ಪೂರ್ವೋಕ್ತ., ಪು.451–452

ಬಿ.ಟಿ.ಹತ್ತಿಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಚಳುವಳಿಗೆ ಕರೆ ನೀಡಿತು. ಅದರಂತೆ ದಿನಾಂಕ 09–08–2002ರಂದು ರೈತ ಸಂಘದ ನೇತೃತ್ವದಲ್ಲಿ ಸಹಸ್ರಾರು ರೈತರು ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿದ್ದ ಮಾನ್ಸಾಂಟೋ ಕಛೇರಿ ಮೇಲೆ ದಾಳಿ ಮಾಡಲು ನಗರಕ್ಕೆ ಆಗಮಿಸಿದ್ದರು. ನಗರ ರೈಲು ನಿಲ್ದಾಣದಿಂದ ಹೊರಟ ರೈತರ ಮೆರವಣಿಗೆಯನ್ನು ಜಕ್ಕರಾಯನಕೆರೆ ಬಳಿ ಪೊಲೀಸರು ತಡೆದರು. ಇದನ್ನು ಖಂಡಿಸಿದ ರೈತರು ರಸ್ತೆಯಲ್ಲೇ ಧರಣಿ ಕುಳಿತರು. ಕೃಷಿ ಸಚಿವ ವಿ.ಎಸ್.ಕೌಜಲಗಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ರೈತ ಮುಖಂಡರೊಂದಿಗೆ ಮಾತನಾಡಿ ಸೂಕ್ತ ಕ್ರಮದ ಭರವಸೆ ನೀಡಿದರು.[17] ಸರ್ಕಾರ ತನ್ನ ನಿಲುವು ಪ್ರಕಟಿಸುವವರೆಗೆ ಚಳುವಳಿ ಹಿಂತೆಗೆದುಕೊಳ್ಳುವಂತೆ ಸಚಿವರು ಮಾಡಿದ ಮನವಿಗೆ ಒಪ್ಪಿದ ರೈತ ಸಂಘ ತನ್ನ ಹೋರಾಟವನ್ನು ನಿಲ್ಲಿಸಿತು. ನಂತರ ರೈತರ ನಿಯೋಗವೊಂದು ಮಾನ್ಸಾಂಟೋ ಕಂಪನಿಯ ನಿರ್ದೇಶಕ ಮಂಜುನಾಥ್ ಅವರ ಬಳಿಗೆ ತೆರಳಿ ಕಂಪನಿಯನ್ನು ತೆರವುಗೊಳಿಸುವಂತೆ ಪತ್ರ ನೀಡಿ ಒತ್ತಾಯಿಸಿತು. ವಿಶ್ವ ರೈತ ಹುತಾತ್ಮರ ದಿನದಂದು ಸೆಪ್ಟೆಂಬರ್–10, 2003ರಲ್ಲಿ ವಿಶ್ವವ್ಯಾಪಾರ ಸಂಸ್ಥೆಯಿಂದ ಹೊರಬನ್ನಿ ಎಂಬ ಒತ್ತಾಯದೊಂದಿಗೆ ವಿಶ್ವವ್ಯಾಪಾರ ಸಂಘಟನೆಯ ಕ್ಯಾನ್‌ಕಾನ್ ಸಮ್ಮೇಳನ ವಿರೋಧಿಸಿ ಬೆಂಗಳೂರಿನ ಮಹಾತ್ಮಾಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ಮಾಡಿತು.

ಈ ನಡುವೆ ಕರ್ನಾಟಕ ರಾಜ್ಯ ರೈತ ಸಂಘವು ಹಲವು ಬಣಗಳಾಗಿ ವಿಭಜಿತವಾದದ್ದು ಹಾಗೂ ಸಂಘದ ಪ್ರಮುಖ ನಾಯಕರ ನಿಧನದಿಂದ ರೈತ ಸಂಘದ ಸಂಘಟನೆ ಹಾಗೂ ಹೋರಾಟಕ್ಕೆ ಸಾಕಷ್ಟು ಹಿನ್ನಡೆಯಾಯಿತು. ದಿನಾಂಕ 19–07–1991ರಲ್ಲಿ ಸಂಘದ ಅಧ್ಯಕ್ಷರಾದ ಎಚ್.ಎಸ್.ರುದ್ರಪ್ಪ, ದಿನಾಂಕ

21–12–1992 ರಲ್ಲಿ ಪ್ರಧಾನ ಕಾರ್ಯದರ್ಶಿಯಾದ ಎನ್.ಡಿ.ಸುಂದರೇಶ್, ದಿನಾಂಕ 03–02–2004 ರಲ್ಲಿ ಅದರ ಅಂದಿನ ಅಧ್ಯಕ್ಷ ನಂಜುಂಡಸ್ವಾಮಿಯವರ ಸಾವು ಹೋರಾಟದ ವೇಗಕ್ಕೆ ಕಡಿವಾಣ ಹಾಕಿತು.[18] ಈಗಾಗಲೇ ನಾಯಕರುಗಳ ನಡುವಿನ ಭಿನ್ನಾಭಿಪ್ರಾಯದಿಂದಾಗಿ ಸಂಘ ವಿಭಜನೆಯಾಗಿತ್ತು. ಅದರಲ್ಲೂ ರಾಜ್ಯರೈತ ಸಂಘದ ಮೆದುಳಿನಂತಿದ್ದ ನಂಜುಂಡಸ್ವಾಮಿಯವರ ಅಗಲಿಕೆ ರೈತಚಳುವಳಿಗೆ ತುಂಬಲಾರದ ನಷ್ಟವಾಗಿತ್ತು. ಇದರಿಂದಾಗಿ 2004ರ ನಂತರದ ಚಳುವಳಿಗಳು ತನ್ನ ಹಿಂದಿನ ಮೊನಚನ್ನು ಕಳೆದುಕೊಳ್ಳತೊಡಗಿದವು. ಆದರೂ ಅದು ತನ್ನ ಹೋರಾಟವನ್ನು ಸ್ಥಗಿತಗೊಳಿಸದೆ, ತನ್ನದೇ ಆದ ಮಿತಿಯಲ್ಲಿ ಮುಂದುವರಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

ದಿನಾಂಕ 28–12–2006 ರಂದು ರೈತ ಸಂಘಟನೆಗಳು ರಾಜ್ಯದ ನೂತನ ಕೃಷಿ ನೀತಿಯನ್ನು ಕುರಿತು ಚರ್ಚಿಸಲು ಬೆಂಗಳೂರಿನಲ್ಲಿ ಸಭೆ ಕರೆದಿದ್ದವು. ದೇಶೀಯ ಕೃಷಿಯನ್ನು ಬಹುರಾಷ್ಟ್ರೀಯ ಮತ್ತು ಬಂಡವಾಳಶಾಹಿ ಕಂಪನಿಗಳಿಗೆ ಒಪ್ಪಿಸುವುದು ಸರ್ಕಾರದ ಕೃಷಿ ನೀತಿಯಾಗಿದೆ. ಕೃಷಿ ಉತ್ಪಾದನೆ ಕುಸಿಯಲು ಕಾರಣಗಳನ್ನು ಗುರುತಿಸಬೇಕಿತ್ತು. ಭೂಹೀನರಿಗೆ ಭೂ ಹಂಚಿಕೆ ಕುರಿತಂತೆ ಯಾವುದೇ ಪ್ರಸ್ತಾಪ ಇಲ್ಲ. ರೈತರ ಆತ್ಮಹತ್ಯೆಗೆ ಸಂಬಂಧಿಸಿದ ಕಾರಣಗಳ ಬಗ್ಗೆ ನಿರ್ದಿಷ್ಟ ಸಮೀಕ್ಷೆ ನಡೆಸಬೇಕೆಂಬ ಡಾ.ಸ್ವಾಮಿನಾಥನ್ ಸಮಿತಿ ವರದಿ ಬಗ್ಗೆ ಯಾವುದೇ ಚಕಾರ ಇಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ಸರ್ಕಾರಿ ಭೂಮಿಯನ್ನು ಗುತ್ತಿಗೆ

---

[17] ದಿನಪತ್ರಿಕೆ., ಪ್ರಜಾವಾಣಿ, ದಿನಾಂಕ 10–08–2002.

[18] ಹಾರೋಗದ್ದೆ ಉಷಾ ರಮೇಶ್ ನಾಯಕ್. (2009). *ರೈತ ಧ್ವನಿ ಎನ್.ಡಿ ಸುಂದರೇಶ್.* ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ. ಪು.13–15.

ನೀಡಲಾಗಿದೆ. ಶೇ.4ರ ಬಡ್ಡಿ ದರದ ಕೃಷಿ ಸೌಲಭ್ಯ ಎಲ್ಲರಿಗೂ ಸಿಕ್ಕಿಲ್ಲ ಹಾಗೂ ಸರ್ಕಾರದ ಕೃಷಿ ನೀತಿಯಲ್ಲಿ ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳೇ ಮುಂದುವರೆದಿವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಹೀಗಾಗಿ ಸರ್ಕಾರದ ಕೃಷಿ ನೀತಿ ವಿರೋಧಿಸಿ 2007 ಜನವರಿ 11 ರಂದು ರಾಜ್ಯವ್ಯಾಪ್ತಿ ಪ್ರತಿಭಟನೆ ನಡೆಸಲಾಯಿತು. ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಕೆ.ಎಸ್.ಪುಟ್ಟಣ್ಣಯ್ಯ ರೈತರಿಗೆ ನೀಡುವ ಸಾಲದ ನೀತಿ ಬದಲಾಗಬೇಕು. ಎ.ಟಿ.ಎಮ್ ಕಾರ್ಡ್ ಮಾದರಿಯಲ್ಲಿ ಎನಿಟೈಮ್ ಲೋನ್ ಕಾರ್ಡನ್ನು ತುರ್ತು ಸಂದರ್ಭದಲ್ಲಿ ಬಳಸಲು ಕೊಡಬೇಕು. ಇದರಿಂದ ರೈತರು ಖಾಸಗಿ ಸಾಲ ಮಾಡುವುದನ್ನು ತಡೆಗಟ್ಟಬಹುದು ಎಂದು ಸರ್ಕಾರವನ್ನು ಒತ್ತಾಯಿಸಿದರು. ರೈತರು ಆತ್ಮಹತ್ಯೆ ಮಾಡಿಕೊಳ್ಳಬಾರದು. ಅಂತಹ ಸಮಸ್ಯೆ ಎದುರಾದಲ್ಲಿ ಸ್ಥಳೀಯ ರೈತಸಂಘವನ್ನು ಸಂಪರ್ಕಿಸಬೇಕೆಂದು ರೈತರಲ್ಲಿ ಆತ್ಮಸ್ಥೈರ್ಯ ತುಂಬುವ ಮಾತುಗಳನ್ನಾಡಿದರು.[19]

**ವಿಶೇಷ ಆರ್ಥಿಕ ವಲಯಗಳ ವಿರುದ್ಧದ ಹೋರಾಟ–2007**

ಸರ್ಕಾರವು ರಸ್ತೆ, ವಿಮಾನ ನಿಲ್ದಾಣ, ಕೈಗಾರಿಕಾ ವಲಯ, ವಿಶೇಷ ಆರ್ಥಿಕ ವಲಯಗಳಿಗಾಗಿ ಭೂಮಿಯನ್ನು ವಶಪಡಿಸಿಕೊಳ್ಳುವುದನ್ನು ವಿರೋಧಿಸಿ ದೇಶದಾದ್ಯಂತ ಹಲವು ಹೋರಾಟಗಳು ನಡೆದಿವೆ. ವಿಶೇಷ ಆರ್ಥಿಕ ವಲಯಕ್ಕೆ ಹೊಸಕೋಟೆ ಸಮೀಪದ ನಂದಗುಡಿ ಸುತ್ತಲಿನ 36 ಗ್ರಾಮಗಳ 4575 ಎಕರೆ ಭೂಮಿ ವಶಪಡಿಸಿಕೊಳ್ಳುವುದರ ವಿರುದ್ಧ ರೈತರು 2007 ರಲ್ಲಿ ರಸ್ತೆ ತಡೆ ಮಾಡಿದರು. 'ನಂದಗುಡಿ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ'ಯು ದಿನಾಂಕ 24–08–2007ರಂದು ಆಯೋಜಿಸಿದ್ದ ಸಭೆಯಲ್ಲಿ ಖ್ಯಾತ ಪರಿಸರವಾದಿ ಮೇಧಾ ಪಾಟ್ಕರ್ ಪಾಲ್ಗೊಂಡಿದ್ದರು. ಅವರು ಬಹುರಾಷ್ಟ್ರೀಯ ಕಂಪನಿಗಳು ಅಗ್ಗದ ಬೆಲೆಗೆ ಭೂಮಿಯನ್ನು ಕೊಂಡು ರಿಯಲ್ ಎಸ್ಟೇಟ್ ದಂಧೆಗಿಳಿದು ಪ್ರಗತಿಯ ಹೆಸರಿನಲ್ಲಿ ವಂಚಿಸುತ್ತಿವೆ. ಹೀಗಾಗಿ ರೈತರು ಕಲ್ಕತ್ತಾದ ನಂದಿಗ್ರಾಮದ ಜನರ ಮಾದರಿಯಲ್ಲಿ ಹೋರಾಡಿ ಅಸ್ತಿತ್ವ ಉಳಿಸಿಕೊಳ್ಳಬೇಕೆಂದು ಕರೆ ನೀಡಿದರು. ಇದೇ ರೀತಿಯ ಹೋರಾಟ ಮಂಗಳೂರಿನಲ್ಲೂ ನಡೆಯಿತು.

2009ರ ಅಕ್ಟೋಬರ್‌ನಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರು ಬಿ.ಟಿ.ಬದನೆ ಜನ–ಜಾನುವಾರು, ಪರಿಸರ ಇವುಗಳ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿದೆ. ಆದರೂ ಕುಲಾಂತರಿ ಬದನೆ ಬೆಳೆದು ಬಿಡುಗಡೆ ಮಾಡಲು ಕುಲಾಂತರಿ ತಂತ್ರಜ್ಞಾನಕ್ಕೆ ಒಪ್ಪಿಗೆ ಸೂಚಿಸಿರುವ ಕೇಂದ್ರ ಸರ್ಕಾರದ ಕ್ರಮ ಸರಿಯಲ್ಲವೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಕ್ಯಾನ್ಸರ್‌ಕಾರಕ ಬಿ.ಟಿ.ಬದನೆಕಾಯಿ ತಳಿಯಿಂದ ದೇಶಿಯ ತಳಿ ನಾಶ ಮಡುವ ಹುನ್ನಾರ ಆಗಬಾರದು.[20] ಇದು ಮುಂದುವರಿದರೆ ಈ ಹಿಂದೆ ಮಾನ್ಸೆಂಟೊ, ಕೆಂಟಕಿ ಕಂಪನಿಗಳ ವಿರುದ್ಧ ಪ್ರತಿಭಟಿಸಿದಂತೆ ಈ ಕುಲಾಂತರಿ ಬಿತ್ತನೆ ಬೀಜಗಳ ವಿರುದ್ಧವೂ ಪ್ರತಿಭಟಿಸುವ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಮುಂದಿನ ದಿನಮಾನದಲ್ಲೂ ಜಾಗತೀಕರಣದ ವಿರುದ್ಧ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದವಾದರೂ ಅವು ಹೆಚ್ಚಿನ ಪ್ರಭಾವವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಲಿಲ್ಲ.

---

[19] ನಾಗರಾಜ್ ಎಂ,ಜಿ. (2010). *ಕನಾಟಕ ರೈತ ಚಳುವಳಿ, ಸತ್ಯಾಗ್ರಹಗಳು. ಸಂಪುಟ–6, ರೈತ ಪ್ರತಿಭಟನೆಯ ಆಧುನಿಕ ಮಾದರಿಗಳು ಸಾಂತ್ವನ ಪ್ರಕ್ರಿಯೆಗಳು.* ವಿಧಾನಮಂಡಲ ಗ್ರಂಥಾಲಯ ಸಮಿತಿ, ವಿಧಾನ ಸೌಧ. ಪು.1850–1853.

[20] ಬಸವರಾಜ ಸೂಳಿಭಾವಿ. (2010). ಬಿ.ಟಿ.ಬದನೆ ಬದುಕು ಬರಿದಾಗಿಸುವ ಕುಲಾಂತರಿ. ಲಡಾಯಿ ಪ್ರಕಾಶನ. ಪು.48–50.

ಜಾಗತೀಕರಣವೆಂಬುದು ಕೃಷಿ ಕ್ಷೇತ್ರ ಎದುರಿಸುತ್ತಿರುವ ಒಂದು ಜ್ವಲಂತ ಸಮಸ್ಯೆಯಾಗಿದ್ದು, ಇದು ಇಂದು ಕೇವಲ ಭಾರತದ ರೈತರ ಸಮಸ್ಯೆಯಾಗಿ ಉಳಿದಿಲ್ಲ. ಹೀಗಾಗಿ ಇದರ ವಿರುದ್ಧ ರೈತರು ಇಂದಿಗೂ ವಿಶ್ವದಾದ್ಯಂತ ನಿರಂತರವಾಗಿ ಹೋರಾಟ ಮಾಡುತ್ತಲೇ ಬಂದಿರುವುದನ್ನು ಗಮನಿಸಬಹುದಾಗಿದೆ.

**ಉಪಸಂಹಾರ**

ಜಾಗತೀಕರಣವೆಂಬುದು ಒಂದು ರೀತಿಯಲ್ಲಿ ವಿಶ್ವದ ಆರ್ಥಿಕತೆಯೊಂದಿಗೆ ರಾಷ್ಟ್ರದ ಆರ್ಥಿಕತೆಯ ಸಂಯೋಜನೆಯನ್ನು ಸೂಚಿಸುತ್ತದೆ. ಇದು ಹೆಚ್ಚಿನ ಅವಲಂಬನೆಗೆ ಜಗತ್ತನ್ನು ಪರಿವರ್ತಿಸಲು ನಿರ್ದೇಶಿಸಲಾದ ಬಹು ತಂತ್ರಗಳ ಸಂಗ್ರಹವಾಗಿದೆ. ಇದರಲ್ಲಿ ಊಹಾತ್ಮಕ ಆರ್ಥಿಕತೆಯ ಬೆಳವಣಿಗೆ, ಉತ್ಪಾದನೆಯ ಏಕಸ್ವಾಮ್ಯತೆ, ಮುಂತಾದ ಋಣಾತ್ಮಕ ಅಂಶಗಳೇ ಅಧಿಕವಾಗಿದ್ದು, ಕೃಷಿ, ಕೈಗಾರಿಕೆ, ಹಣಕಾಸು, ಶಿಕ್ಷಣ, ಸಂಸ್ಕೃತಿ ಮುಂತಾದವುಗಳ ಮೇಲೆ ಗಂಭೀರ ಪರಿಣಾಮಗಳನ್ನು ಉಂಟು ಮಾಡುತ್ತಿದೆ.

ಹೀಗಾಗಿ ಉದಾರೀಕರಣ, ಖಾಸಗೀಕಣ ಮತ್ತು ಜಾಗತೀಕರಣದ ಪ್ರಭಾವ ಭಾರತದ ಕೃಷಿ ಕ್ಷೇತ್ರದ ಮೇಲೆ ಸಾಕಷ್ಟು ನೇರ ದುಷ್ಪರಿಣಾಮಗಳನ್ನು ಬೀರಿದೆ. ಇದರಿಂದ ಕೃಷಿ ಬಿಕ್ಕಟ್ಟು ಸೃಷ್ಟಿಯಾಗಿ ಸಹಸ್ರಾರು ರೈತರ ಮಾರಣಹೋಮವಾಗಿದೆ ಎಂದು ಆತಂಕ ವ್ಯಕ್ತಪಡಿಸಿದ ಕರ್ನಾಟಕ ರಾಜ್ಯ ರೈತ ಸಂಘ ಅವುಗಳಿಂದ ಹೂರಬರುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರುತ್ತಾ, ಬಿಡುವಿಲ್ಲದ ಹೋರಾಟ ಹಾಗೂ ಪ್ರತಿಭಟನೆಗಳ ಮೂಲಕ ಹಲವಾರು ಚಳುವಳಿಗಳನ್ನು ಸ್ಥಳೀಯ ಹಂತದಿಂದ ಅಂತರರಾಷ್ಟ್ರೀಯ ಹಂತದವರೆಗೆ ಮಾಡಿರುವುದು ಕಂಡುಬರುತ್ತದೆ. ಒಟ್ಟಾರೆ ಕರ್ನಾಟಕ ರಾಜ್ಯ ರೈತ ಸಂಘದ ಈ ಎಲ್ಲಾ ಹೋರಾಟಗಳು ಜಾಗತೀಕರಣದ ವಿರೋಧಿ ನೆಲೆಯಲ್ಲಿ ನಡೆದಿರುವುದನ್ನು ಈ ಮೂಲಕ ನೋಡಬಹುದಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಬಸವರಾಜ ಸೂಳಿಭಾವಿ. (2010). ಬಿ.ಟಿ.ಬದನೆ ಬದುಕು ಬರಿದಾಗಿಸುವ ಕುಲಾಂತರಿ. ಲಡಾಯಿ ಪ್ರಕಾಶನ.
- ಚಂದ್ರಶೇಖರ್ ಎಸ್, ಸುರೇಂದ್ರರಾವ್ ಬಿ (ಸಂ). (2016). *ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು.* ಸಂಪುಟ–9, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಕುಮಾರ್ ಕೆ. ಎಂ. (2008). *ಕರ್ನಾಟಕದಲ್ಲಿನ ರೈತ ಚಳುವಳಿ.* ಕನ್ನಡ ಸಾಹಿತ್ಯ ಪರಿಷತ್ತು.
- ಮುಜಾಫರ್ ಅಸ್ಸಾದಿ. (2009). *ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ, ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ.* ಪ್ರಗತಿ ಗ್ರಾಫಿಕ್ಸ್.
- ನಾಗರಾಜ್ ಎಂ,ಜಿ. (2006). *ಕನಾಟಕ ರೈತ ಚಳುವಳಿ, ಸತ್ಯಾಗ್ರಹಗಳು.* ಸಂಪುಟ–2, ವಿಧಾನಮಂಡಲ ಗ್ರಂಥಾಲಯ ಸಮಿತಿ, ವಿಧಾನ ಸೌಧ.
- ನಂಜುಂಡಸ್ವಾಮಿ.ಎಂ.ಡಿ.. (2000). ರೈತ ಚಳುವಳಿ: ಮತ್ತೆ ಪರ್ಯಾಯ ಸರ್ಕಾರದೆಡೆಗೆ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ.

- ರಂಗಸ್ವಾಮಿ.ಎ., (ಪ್ರ.ಸಂ). (2012). *ಸತ್ಯನಾರಾಯಣ (ಲೇ), ಜಾಗತೀಕರಣ ಮತ್ತು ಕರ್ನಾಟಕ.* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.
- ಸವಿತ.ಬಿ.ಸಿ. (2010). *ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು.18.
- ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ.). (2010). *ಸಮಕಾಲೀನ ಕರ್ನಾಟಕ, ಸಂಪುಟ–6.* ಕನ್ನಡ ವಿಶ್ವವಿದ್ಯಾಲಯ.